ಉಳಿದಂಥ ನಿವೇಶನಗಳನ್ನು ಪ್ರಾಧಿಕಾರದ ಅಧ್ಯಕ್ಷರು ಅವರ ಮನಸಾರೆ ಹಂಚಿದ್ದಾರೆ. ಜಿಲ್ಲಾಧಿಕಾರಿಯವರೇನು ಆರ್ಥಿಕವಾಗಿ ಹಿಂದುಳಿದವರಿಗೆ ನಿವೇಶನವನ್ನು ಕೊಡಬೇಕಾಗಿತ್ತೋ ಆ ರೀತಿ ಕೊಡುವುದರಲ್ಲಿ ಯಶಸ್ವಿಯಾಗಿಲ್ಲ. ನನ್ನ ಕ್ಷೇತ್ರದಲ್ಲಿ ಆಶ್ರಯ ಯೋಜನೆಯಲ್ಲೇನು ನಿವೇಶನಗಳನ್ನು ಕೊಡಬೇಕೆಂದು ಸರ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಆದರನ್ವಯ ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಯವರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಪತ್ರವನ್ನು ಬರೆದು 20' X 30' ನಿವೇಶನಗಳನ್ನು ಆಶ್ರಯ ಸಮಿತಿಗೆ ವರ್ಗಾಯಿಸುವಂತೆ ಸೂಚನೆ ನೀಡಿದರು. ಆದರೆ ನಗರ ಪ್ರಾಧಿಕಾರದ ಅಧ್ಯಕ್ಷರು ಅದನ್ನು ಬದಿಗಿಟ್ಟು ಅವರ ಮನಸಾರೆ ನಿವೇಶನಗಳನ್ನು ಮಾರಾಟ ಮಾಡಿದ್ದಾರೆ. ನಗರ ಪ್ರಾಧಿಕಾರಕ್ಕೆ ಸರ್ಕಾರ ನೀಡಿರುವ ಅನುಮತಿಯಲ್ಲಿ ಇ.ಡಬ್ಲ್ಯೂ.ಎಸ್. ಫಲಾನುಭವಿಗಳ್ಯಾರಿದ್ದಾರೆ ಅವರಿಗೆ ಶೇಕಡಾ 75ರಷ್ಟು ರಿಯಾಯಿತಿ ದರದಲ್ಲಿ ನಿವೇಶನವನ್ನು ಮಾರಾಟ ಮಾಡಲು ಅನುಮತಿ ನೀಡಿದೆ. ಆದರೆ ಇದನ್ನು ಅಲ್ಲಿನ ಅಧ್ಯಕ್ಷರು ಯಾರ ಗಮನಕ್ಕೂ ತರದೆ ನಿವೇಶನಗಳನ್ನು ಮನಸಾರೆ ಮಾರಾಟ ಮಾಡಿದ್ದಾರೆ. ಇದರಿಂದ ನಗರ ಪ್ರದೇಶ ವ್ಯಾಪ್ತಿಯಲ್ಲಿ ವಾಸಿಸುವಂಥ ಇ.ಡಬ್ಲ್ಯೂ.ಎಸ್. ಫಲಾನುಭವಿಗಳಿಗೆ ನಿವೇಶನ ಇಲ್ಲದಿರುವುದರಿಂದ ಆ ಪ್ರಾಧಿಕಾರದ ಅಧ್ಯಕ್ಷರು ತಪ್ಪು ಮಾಡಿದ್ದಾರೆ. ಜಿಲ್ಲಾಧಿಕಾರಿಯವರು ಬರೆದ ಪತ್ರಕ್ಕೂ ಮಾನ್ಯತೆ ಕೊಡದೆ ನೇರವಾಗಿ ಪ್ರಾಧಿಕಾರದ ಅಧ್ಯಕ್ಷರು ಈ ನಿವೇಶನಗಳನ್ನು ಮಾರಾಟ ಮಾಡಿಕೊಂಡಿದ್ದಾರೆ. ಕಾನೂನಿಗೆ ವಿರುದ್ಧವಾಗಿ ನಿರ್ಣಯಗಳನ್ನು ತೆಗೆದುಕೊಂಡಿರುವುದರಿಂದ ಇದರ ಬಗ್ಗೆ ತನಿಖೆ ಮಾಡಿ ಅಧ್ಯಕ್ಷರು ಮಾಡಿರುವ ತಪ್ಪಿನ ಬಗ್ಗೆ ತನಿಖೆ ಮಾಡಿ ಸರ್ಕಾರದಿಂದ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದು ನನ್ನ ಪ್ರಶ್ನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಜಿಲ್ಲಾಧಿಕಾರಿಯವರಿಗೆ ಆಶ್ರಯ ಯೋಜನೆಯ ಅಡಿಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳನ್ನು ಕೊಡಲು ಬರುವುದಿಲ್ಲ. ಆದರೂ ಇಲ್ಲಿ ಕೊಟ್ಟಿದ್ದಾರೆ. ಅದು ಹೇಗೆ ಆಗಿದೆಯೋ ನನಗೆ ಗೊತ್ತಿಲ್ಲ. ನಗರಸಭೆಯವರು ಹಣವನ್ನು ತುಂಬಿದ್ದಾರೆ. ಆದ್ದರಿಂದ ಅವರಿಗೆ ಇದನ್ನು ವಯಲೇಷನ್ ಮಾಡಿ ನಿವೇಶನವನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರು 560 ನಿವೇಶನಗಳನ್ನು ಪ್ರಾಧಿಕಾರದ ಅಧ್ಯಕ್ಷರು ಅರ್ಜಿದಾರರನ್ನು ಆಯ್ಕೆಮಾಡುವಾಗ ನಿಯಮಗಳನ್ನು ಪರಿಪಾಲನೆ ಮಾಡದೆ ಮನಸಾರೆ ಹಂಚಿದ್ದಾರೆಂದು ಆರೋಪ ಮಾಡಿದ್ದಾರೆ. ಆ ರೀತಿ ಏನಾದರೂ ಕಾನೂನು ಬಾಹಿರವಾಗಿ ನಡೆದುಕೊಂಡಿದ್ದರೆ ಆ ಕಡತವನ್ನು ತರಿಸಿ ಮಾನ್ಯ ಸದಸ್ಯರೊಂದಿಗೆ ಕುಳಿತು ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ರಾಜ್ಯದ ಪ್ರಮುಖ ನಗರಗಳಲ್ಲಿ ನೋಂದಣಿ ಶುಲ್ಕ

162 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಪ್ರಮುಖ ನಗರಗಳ ಸ್ಥಿರಾಸ್ತಿಗಳ (ಭೂಮಿ ಕಟ್ಟಡ) ಮೌಲ್ಯ ಕಡಿಮೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಅ) ಹಾಗಿದ್ದಲ್ಲಿ ಅದಕ್ಕೆ ತಕ್ಕಂತೆ ಆಸ್ತಿಗಳ ವರ್ಗಾವಣೆಯ ಕುರಿತು ನೋಂದಣಿ ಶುಲ್ಕ ಮತ್ತು ಸ್ಟಾಂಪ್ ಡ್ಯೂಟಿ ಕಡಿಮೆ ಮಾಡುವ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಆ) ಅದೇ ರೀತಿ ಸಬ್‌ರಿಜಿಸ್ಟ್ರಾರ್ ಕಛೇರಿಗಳಲ್ಲಿ ಇರತಕ್ಕ ಅವುಗಳ ಮೌಲ್ಯವನ್ನು ಕಡಿಮೆ ಗೊಳಿಸಲಾಗುವುದೇ?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :

ಅ) ಬಂದಿದೆ.

ಆ) ಇಲ್ಲಾ.

ಇ) ಈ ವಿಷಯವನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಶ್ರೀ ಜಗದೀಶ್‌ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಪ್ರಮುಖ ನಗರಗಳ ಸ್ಥಿರಾಸ್ತಿಗಳ (ಭೂಮಿ ಕಟ್ಟಡ) ಮೌಲ್ಯ ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಬಂದಿದೆ ಎಂದು ಉತ್ತರ ಕೊಟ್ಟಿದ್ದಾರೆ. ಹಾಗಿದ್ದರೆ ಅದಕ್ಕೆ ತಕ್ಕಂತೆ ಸ್ಟ್ಯಾಂಪ್ ಡ್ಯೂಟಿಯನ್ನು ಕಡಿಮೆ ಮಾಡುತ್ತೀರಾ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಇದರ ಬಗ್ಗೆ ಮುಂದೆ ಪರಿಶೀಲನೆ ಮಾಡುವುದಾಗಿ ಉತ್ತರ ಕೊಟ್ಟಿದ್ದಾರೆ. ಆಸ್ತಿಯನ್ನು ಮೌಲ್ಯ ಮಾಪನ ಮಾಡುವ ಸಂದರ್ಭದಲ್ಲಿ ಸಬ್‌ರಿಜಿಸ್ಟ್ರಾರ್‌ರವರ ಕಛೇರಿಯಲ್ಲಿ ಪ್ರತಿ ವರ್ಷ ಇಲ್ಲವೆ ಆರು ತಿಂಗಳಿಗೆ ಸ್ಟ್ಯಾಂಪ್ ಡ್ಯೂಟಿಯನ್ನು 20-30 ಪರ್‌ಸೆಂಟ್ ಜಾಸ್ತಿ ಮಾಡುತ್ತಾರೆ. ಅವರೇನು ರಿಜಿಸ್ಟರ್‌ನ್ನು ಇಟ್ಟಿರುತ್ತಾರೆ ಅದರಲ್ಲಿ ಪ್ರತಿ ವರ್ಷ ಮಾರ್ಕೆಟ್ ವ್ಯಾಲ್ಯೂವನ್ನು 20 ಪರ್‌ಸೆಂಟ್ ಹೆಚ್ಚು ಮಾಡಿಕೊಂಡು ಹೋಗುತ್ತಾರೆ. ಕೆಲವು ಸಂದರ್ಭಗಳಲ್ಲಿ ಆರು ತಿಂಗಳಿಗೆ ಒಂದು ಸಲ ಆ ರೀತಿ ಮಾಡಿದ್ದಾರೆ. ಪ್ರತಿಯೊಬ್ಬ ಸಬ್‌ರಿಜಿಸ್ಟ್ರಾರ್‌ರವರಿಗೆ ಪ್ರತಿ ವರ್ಷ ಇಷ್ಟು ವಸೂಲಿ ಹೆಚ್ಚು ಮಾಡಬೇಕೆಂದು ಸರ್ಕಾರದಿಂದ ಸೂಚನೆಯೇನಾದರೂ ಇದೆಯೇ?

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೆ, ಸ್ಥಿರಾಸ್ತಿಗಳನ್ನು ನೋಂದಣಿ ಮಾಡುವ 1957ನೇ ಕಾಲಂ 45ರ ಕಾನೂನು ಏನಿದೆ ಅದನ್ನು ತಿದ್ದುಪಡಿ ಮಾಡಿ ಮಾರ್ಕೆಟ್ ವ್ಯಾಲ್ಯೂವನ್ನು ಹೆಚ್ಚಿಗೆ ಮಾಡಿ ವರದಿಯನ್ನು ಕೊಟ್ಟು ಅದನ್ನು ಸರ್ಕಾರ ಒಪ್ಪಿಕೊಂಡು ಒಂದು ಅಧಿಸೂಚನೆಯನ್ನು 1992ರಲ್ಲಿ ಹೊರಡಿಸಿತು. ಅದರಲ್ಲಿ ನಿಗದಿಮಾಡಿರುವ ಮಾರುಕಟ್ಟೆಯ ಮೌಲ್ಯ ಜಾಸ್ತಿಯಾಗಿರುವುದರಿಂದ ರಾಜ್ಯಾದ್ಯಂತ ನೋಂದಣಿಗಳ ಸಂಖ್ಯೆ ಕಡಿಮೆಯಾಯಿತು. ಇದರಿಂದ ಸರ್ಕಾರಕ್ಕೆ ಬರತಕ್ಕ ಆದಾಯ ಕಡಿಮೆಯಾಯಿತು. ಇದು ಸರ್ಕಾರದ ಗಮನಕ್ಕೆ ಬಂದಿದೆ. ಈ ಸಮಸ್ಯೆ ಎಲ್ಲಾ ಕಡೆ ಕಂಡುಬಂದಮೇಲೆ, ನಾವು ಯಾವ್ಯಾವ ಜಿಲ್ಲೆಗಳಲ್ಲಿ ಏನೇನು ಮಾರುಕಟ್ಟೆ ಬೆಲೆ ಇದೆ, ಅದರ ಪ್ರಕಾರ ಸಾರ್ವಜನಿಕರನ್ನು ಸಂಪರ್ಕ ಮಾಡಿ, ಇಲಾಖೆಯ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಇದರಲ್ಲಿ ಪರಿಷ್ಕರಣೆ ಮಾಡಿ ಮತ್ತೊಂದು ಒಳಗೊಂಡ ಅಧಿಸೂಚನೆಯನ್ನು ಹೊರಡಿಸುತ್ತೇವೆಂದು ಸೂಚನೆ ಕೊಟ್ಟಿದ್ದೇವೆ. ಬೆಂಗಳೂರು ಜಿಲ್ಲೆಗೆ ಸಂಬಂಧಪಟ್ಟ ವರದಿ ಈಗಾಗಲೇ ಬಂದಿದೆ. ಇನ್ನು ಕೆಲವು ಜಿಲ್ಲೆಗಳ ವರದಿ ಬರಬೇಕಾಗಿದೆ. ಅದು ಬಂದ ತಕ್ಷಣ ನಾವೇನು ಈಗ ಮಾರುಕಟ್ಟೆ ಬೆಲೆ ನಿಗದಿ ಮಾಡಿದ್ದೇವೆ ಅದನ್ನು

ಕಡಿಮೆ ಮಾಡುತ್ತೇವೆ. ರಿಜಿಸ್ಟ್ರೇಷನ್ ಫೀ, ಸ್ಟ್ಯಾಂಪ್ ಡ್ಯೂಟಿ ಏನಿದೆ ಅದನ್ನು ಕಡಿಮೆ ಮಾಡತಕ್ಕ ಪ್ರಶ್ನೆಯೇ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಸ್ಟ್ಯಾಂಪ್ ಡ್ಯೂಟಿಯನ್ನು ಕಡಿಮೆ ಮಾಡಿ ಎಂದು ನಾವು ಕೇಳುತ್ತಿಲ್ಲ. ಆದರೆ ಮಾರುಕಟ್ಟೆ ಮೌಲ್ಯ ಜಾಸ್ತಿ ಇದೆ. ಹುಬ್ಬಳ್ಳಿಯನ್ನೇ ಉದಾಹರಣೆ ತೆಗೆದುಕೊಳ್ಳುವುದಾದರೆ, ಇವತ್ತು ಒಂದು ಗುಂಟೆಗೆ ಅರವತ್ತು ಸಾವಿರ ಇದ್ದದ್ದು ಈಗ ಐವತ್ತು ಸಾವಿರ ಆಗಿದೆ. 1996ರಲ್ಲಿ ಇಂಡಿಯಾ ಟು ಡೇ ಪತ್ರಿಕೆಯಲ್ಲಿ ಬೆಂಗಳೂರು, ಬಾಂಬೆ ಮುಂತಾದ ಪ್ರಮುಖ ನಗರಗಳ ಎಸ್ಟೇಟ್ ಮೌಲ್ಯ ಕಡಿಮೆಯಾಗಿದೆಯೆಂದು ಅಂಕಿಸಂಖ್ಯೆ ಪ್ರಕಟವಾಗಿತ್ತು. ಹುಬ್ಬಳ್ಳಿಯಲ್ಲೂ ಅದೇ ಸ್ಥಿತಿ ಇದೆ. ಯಾವಾಗ ಮಾರುಕಟ್ಟೆಯ ಬೆಲೆ ಜಾಸ್ತಿ ಇರುತ್ತದೋ ಆಗ ಅದೇ ಬೆಲೆಗೆ ಸ್ಟ್ಯಾಂಪ್ ಡ್ಯೂಟಿ ತೆಗೆದುಕೊಳ್ಳುತ್ತೇವೆ, ಆದರೆ ಮಾರುಕಟ್ಟೆ ಮೌಲ್ಯ ಕಡಿಮೆಯಾಗಿದ್ದಾಗಲೂ ಮೊದಲಿನ ಬೆಲೆಯಲ್ಲೇ ಸ್ಟ್ಯಾಂಪ್ ಡ್ಯೂಟಿ ತೆಗೆದುಕೊಳ್ಳುವುದು ತಪ್ಪು. ಇಂದು ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಒಂದು ಗುಂಟೆಗೆ 80 ಸಾವಿರ ಇದ್ದರೆ, ಮಾರುಕಟ್ಟೆಯಲ್ಲಿ 50 ಸಾವಿರ ಇರುತ್ತದೆ. ಮತ್ತು 80 ಸಾವಿರಕ್ಕೆ ಸ್ಟ್ಯಾಂಪ್ ಡ್ಯೂಟಿ ಕೊಡಿ ಎಂದು ಹೇಳುತ್ತಾರೆ. ಆದ್ದರಿಂದ ವೈಜ್ಞಾನಿಕ ರೀತಿಯಲ್ಲಿ ಇದು ನಿಗದಿಯಾಗಬೇಕಾಗುತ್ತದೆ. ಹಾಗೆಯೇ ನಮ್ಮಲ್ಲಿ ಕೃಷಿ ಭೂಮಿಯಲ್ಲಿ ಒಂದು ಎಕರೆಗೆ 40 ಸಾವಿರ -ವಾಗುವುದನ್ನು ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ 70 ಸಾವಿರವೆಂದು ನಿಗದಿ ಮಾಡಿಕೊಂಡಿದ್ದಾರೆ. ಇದರಿಂದ ಎಲ್ಲರಿಗೂ ಅನ್ಯಾಯವಾಗುತ್ತದೆ. ಇದರಿಂದ ಸ್ಟ್ಯಾಂಪ್ ಡ್ಯೂಟಿ ಹೆಚ್ಚು ವಸೂಲಾಗುವುದಿಲ್ಲ. ಸರ್ಕಾರಕ್ಕೆ ಆದಾಯ ಕಡಿಮೆಯಾಗುವುದು. ಅಕ್ರಮವಾಗಿ ವ್ಯವಹಾರಗಳು ನಡೆಯಲು ಕಾರಣವಾಗುತ್ತದೆ. ಆದ್ದರಿಂದ ಇದರ ಬಗ್ಗೆ ವೈಜ್ಞಾನಿಕವಾದ ಚಿಂತನೆ ಸರ್ಕಾರದಿಂದ ಆಗಬೇಕಾಗುತ್ತದೆ. ಮಾರುಕಟ್ಟೆಯಲ್ಲಿ ಆಸ್ತಿಗಳ ಮೌಲ್ಯ ಕಡಿಮೆಯಾದಾಗ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲೂ ಅದರ ಬೆಲೆ ಕಡಿಮೆ ಮಾಡಬೇಕಾಗುತ್ತದೆ.

ಉಪಾಧ್ಯಕ್ಷರು : ಬೆಂಗಳೂರಿನಲ್ಲೂ ಅದೇ ಆಗಿದೆ. ಆರ್.ಎಂ.ವಿ. ಎರಡನೆ ಹಂತ, ಎರಡನೆ ಬ್ಲಾಕ್‌ನಲ್ಲಿರುವ ನಮ್ಮದೊಂದು ಸೈಟನ್ನು ರಿಜಿಸ್ಟ್ರೇಷನ್ ಮಾಡಲು ಹೋಗಿದ್ದೆವು. ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ ಒಂದು ಚದುರ ಮೀಟರ್‌ಗೆ ಎರಡು ಸಾವಿರ ರೂಪಾಯಿ ನಿಗದಿ ಮಾಡಿದ್ದಾರೆ. ಆ ರೀತಿ ಬೆಲೆಯಾದರೆ ಯಾರು ತೆಗೆದುಕೊಳ್ಳುತ್ತಾರೆ? ವ್ಯವಹಾರವೇ ನಡೆಯುತ್ತಿಲ್ಲ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೆ, ಇದು ಸರ್ಕಾರದ ಗಮನಕ್ಕೆ ಬಂದಿದೆ. ಮಾರುಕಟ್ಟೆಯ ಬೆಲೆ 40 ಸಾವಿರ ಇದ್ದರೆ ನಮ್ಮ ನೋಂದಣಿ ಬೆಲೆ 60 ಸಾವಿರ ಆಗಿರಬಹುದು. ಇದರಿಂದಾಗಿ ನೊಂದಣಿಗಳು ಹೆಚ್ಚಾಗಿ ಆಗುತ್ತಿಲ್ಲ. ಆದ್ದರಿಂದ ತಾವು ಹೇಳಿದಂತೆ ಮಾರುಕಟ್ಟೆಯ ಬೆಲೆ ಎಷ್ಟಿದೆಯೆಂಬ ಬಗ್ಗೆ ಸಾರ್ವಜನಿಕರ ಜೊತೆ ಚರ್ಚೆ ಮಾಡಿ, ಅಧಿಕಾರಿಗಳು ಅಧ್ಯಯನ ಮಾಡಿ ವರದಿ ಕೊಡಿಯೆಂದು ಈಗಾಗಲೇ ಹೇಳಿದ್ದೇವೆ. ಬೆಂಗಳೂರು ನಗರದ ವರದಿ ಈಗಾಗಲೇ ಬಂದಿದೆ. ಇನ್ನೆರಡು ಮೂರು ಜಿಲ್ಲೆಗಳಿಂದ ಬರಬೇಕಾಗಿದೆ, ಅದು ಬಂದಮೇಲೆ ಪರಿಷ್ಕರಣೆ ಮಾಡಿ ನಿಜವಾದಂಥ ಮಾರುಕಟ್ಟೆಯ ಬೆಲೆ ಎಷ್ಟಿದೆ ಅದನ್ನು ನಿಗದಿ ಮಾಡಿ ಅಧಿಸೂಚನೆಯನ್ನು ಹೊರಡಿಸುತ್ತೇವೆ.

ಅದರ ಪ್ರಕಾರ ನೋಂದಣಿಯಾಗುತ್ತದೆ. ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಏನಾದರೂ ಅಕ್ರಮಗಳು ನಡೆದರೆ ಅದಕ್ಕೆ ಅಸ್ಪದ ಕೊಡುವುದಿಲ್ಲ. ರೈತರಿಂದ, ನೋಂದಣಿ ಮಾಡುವವರಿಂದ ಒಂದು ರೂಪಾಯಿ ಹೆಚ್ಚಿಗೆ ಪಡೆಯುತ್ತಾರೆಂದು ಸರ್ಕಾರದ ಗಮನಕ್ಕೆ ಬಂದರೆ ಅಂಥವರ ವಿರುದ್ಧ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಯಾವುದೇ ಅಧಿಕಾರಿಗಳು ಇರಲಿ, ಏನೇ ಶಿಫಾರಸ್ಸನ್ನು ಹೊಂದಿರಲಿ ಇಂಥ ಅಕ್ರಮಗಳಿಗೆ ಯಾರು ಭಾಗಿಯಾಗುತ್ತಾರೋ ಅವರಿಗೆ ಸರ್ಕಾರ ಮಣೆಯುವುದಿಲ್ಲ. ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಲಂಚ ಆಗಬೇಕೆಂಬುದು ನಮ್ಮ ಸರ್ಕಾರದ ನಿಲುವು. ಆ ರೀತಿ ಕ್ರಮ ತೆಗೆದುಕೊಳ್ಳುತ್ತೇವೆ. ಯಾವುದೇ ಮುಲಾಜು ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ನನ್ನ ಪ್ರಶ್ನೆಯೊಂದಕ್ಕೆ ಉತ್ತರ ಬರಲಿಲ್ಲ. ಪ್ರತಿ ವರ್ಷ ಇಂತಿಷ್ಟು ಹೆಚ್ಚು ಮಾಡಬೇಕೆಂದು ಸರ್ಕಾರದಿಂದ ಆದೇಶವಿದೆಯೇ? ಪ್ರತಿ ವರ್ಷ ಇಷ್ಟು ಟಾರ್ಗೆಟ್‌ನ್ನು ನೀವು ಕೊಡಲೇ ಬೇಕೆಂದು ಸಬ್ ರಿಜಿಸ್ಟ್ರಾರ್‌ರವರಿಗೆ ಸರ್ಕಾರದಿಂದ ಆದೇಶವೇನಾದರೂ ಹೋಗುತ್ತದೆಯೇ?

11.30 ಎ.ಎಂ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೇ, ಆ ರೀತಿ ಪ್ರತಿ ವರ್ಷ ಇಷ್ಟು ಪರ್ಸೆಂಟೇಜ್ ಎನ್ನತಕ್ಕಂಥ ನಿಯಮವೇನೂ ಇಲ್ಲ. ಮಾರ್ಕೆಟ್ ವ್ಯಾಲ್ಯೂ ಅನ್ನು ನಾವು ಅಸೆಸ್ ಮಾಡಿ. ಅಧಿಸೂಚನೆ ಹೊರಡಿಸಿದ ಮೇಲೆ ಅದರ ಪ್ರಕಾರ ಅವರು ರಿಜಿಸ್ಟ್ರೇಷನ್ ಮಾಡಬೇಕು.

ಶ್ರೀ ಎ. ರಾಮದಾಸ್ : ಮಾನ್ಯ ಉಪಾಧ್ಯಕ್ಷರೇ, ಇದರಲ್ಲಿ ಒಂದು ತಪ್ಪು ವಿಚಾರ ಇದೆ. ಇಲ್ಲಿ ಯಾವುದೇ ರೇಟ್ ಅನ್ನು ಎನ್‌ಹ್ಯಾನ್ಸ್ ಮಾಡಿದ ನಂತರದಲ್ಲಿ ಗೆಜೆಟ್ ನೋಟಿಫಿಕೇಷನ್ ಆದ ನಂತರದಲ್ಲಿ ಮೂರು ವರ್ಷಗಳ ಕಾಲದಲ್ಲಿ ಏರಿಸಬೇಕೆಂದು ಇದೆ. ಆದರೆ ಇವತ್ತಿನವರೆಗೆ ಆಗಿರುವಂತಹ ವ್ಯವಸ್ಥೆ ಇಷ್ಟೆ, ಅಲ್ಲಿಯ ಜಿಲ್ಲೆಯ ರಿಜಿಸ್ಟ್ರಾರ್ ರೇಟ್ ಅನ್ನು ಎನ್‌ಹ್ಯಾನ್ಸ್ ಮಾಡಿದ ಮೇಲೆ ಮೂರು ವರ್ಷಗಳ ಕಾಲದಿಂದ ಗೆಜೆಟ್ ನೋಟಿಫಿಕೇಷನ್ ಮಾಡಿಲ್ಲ. ಗೆಜೆಟ್ ನೋಟಿಫಿಕೇಷನ್ ಮಾಡಿಲ್ಲ ಎನ್ನುವಂತಹ ಶೆಲ್ಟರ್‌ನ ಆಧಾರದ ಮೇಲೆ ಹೀಗೆ ಮಾಡುತ್ತಿದ್ದಾರೆ.....

ಉಪಾಧ್ಯಕ್ಷರು : ಆಯವ್ಯಯದ ಮೇಲೆ ಚರ್ಚೆ ನಡೆಸುವಾಗ ನಿಮಗೆ ಎಲ್ಲಾ ವಿಚಾರಗಳ ಬಗ್ಗೆ ಮಾತನಾಡಲು ಹೆಚ್ಚಿನ ಸಮಯಾವಕಾಶ ಸಿಗುತ್ತದೆ. ಆಗ ಮಾತನಾಡಿ. ಈಗ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಚಂದ್ರಕಾಂತ್ ಬೆಲ್ಲದ್ : ಸನ್ಮಾನ್ಯ ಉಪಾಧ್ಯಕ್ಷರೇ, ಪ್ರತಿ ವರ್ಷ ಶೇಕಡ 20ರಷ್ಟು ಹೆಚ್ಚು ಮಾಡಬೇಕೆಂದೇನೂ ಸರ್ಕಾರದ ಆದೇಶ ಇಲ್ಲವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಆದರೆ ಈಗಾಗಲೇ ಆ ಪ್ರಕಾರವಾಗಿ ಪ್ರತಿ ವರ್ಷ ಹೆಚ್ಚಿಗೆ ವಸೂಲಿ ಮಾಡಿದ್ದಾರೆ. ಅದನ್ನು ಏನಾದರೂ .....

ಉಪಾಧ್ಯಕ್ಷರು : ಮಾನ್ಯ ಚಂದ್ರಕಾಂತ್ ಬೆಲ್ಲದ್‌ರವರೇ, ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೇ, ಹೊರಡಿಸಿರತಕ್ಕಂತಹ ಅಧಿಸೂಚನೆ ಪ್ರಕಾರ ಮಾರ್ಕೆಟ್ ವ್ಯಾಲ್ಯೂ ಜಾಸ್ತಿ ಇದೆ. ಅದರಿಂದ ರಿಜಿಸ್ಟ್ರೇಷನ್ ಕಡಿಮೆಯಾಗಿದೆ ಎನ್ನುವುದಾದರೆ

ಸರ್ಕಾರದ ಗಮನಕ್ಕೆ ಬಂದಿದೆ. ಅದನ್ನೇ ನಾವೀಗ ಪರಿಷ್ಕರಣೆ ಮಾಡುತ್ತಿದ್ದೇವೆ. ಅದು ಮಾಡಿದ ಮೇಲೆ ಈ ತರಹದ ಸಮಸ್ಯೆ ಉದ್ಭವವಾಗುವುದಿಲ್ಲ.

ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಪ್ರೋತ್ಸಾಹ

171 - ಶ್ರೀ ಎನ್. ಯೋಗೇಶ್ ಭಟ್ (ಮಂಗಳೂರು) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಿ, ನಿರುದ್ಯೋಗ ನಿವಾರಣೆ ಮಾಡಲು 98-99ರ ಸಾಲಿನಲ್ಲಿ ರಾಜ್ಯ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಆ) ಈ ಬಗ್ಗೆ 1995-96, 1996-97 ಮತ್ತು 1997-98ರಲ್ಲಿ ಸರ್ಕಾರದ ಸಾಧನೆಗಳೇನು?

ಇ) ಪ್ರಸ್ತುತ ಕೇಂದ್ರ ಸರ್ಕಾರದಿಂದ ಈ ನಿಟ್ಟಿನಲ್ಲಿ ಎಷ್ಟು ಅನುದಾನ ಹಾಗೂ ಸಹಾಯಧನ ರಾಜ್ಯ ಸರ್ಕಾರ ಪಡೆಯುತ್ತಿದೆ?

ಶ್ರೀ ಬಿ. ಎ. ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು) :

ಅ) ರಾಜ್ಯದಲ್ಲಿ ನಿರುದ್ಯೋಗ ನಿವಾರಣೆಗಾಗಿ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯಡಿ ಹಣಕಾಸು ಸಂಸ್ಥೆಗಳಿಂದ ಸಾಲ ಮಂಜೂರು ಮಾಡಲು ಅನುವು ಮಾಡಿಕೊಡಲಾಗುತ್ತಿದೆ. ಹಾಗೂ 'ವಿಶ್ವ' ಯೋಜನೆಯಡಿ ಗ್ರಾಮಾಂತರ ಪ್ರದೇಶಗಳಲ್ಲಿ ಗುಡಿ ಕೈಗಾರಿಕೆಗಳನ್ನು ಸ್ಥಾಪಿಸಲು ಅವಶ್ಯಕತೆ ಇರುವ ತರಬೇತಿ ನೀಡಿ, ತರಬೇತಿ ಹೊಂದಿದ ಹಾಗೂ ಅನುವಂಶಿಕ ಕುಶಲಕರ್ಮಿಗಳಿಗೆ ಹಣಕಾಸು ಸಂಸ್ಥೆಗಳಿಂದ ಸಾಲ ಮಂಜೂರಾತಿ ಮಾಡಲು ಅನುವು ಮಾಡಿಕೊಡಲಾಗುತ್ತಿದೆ.

ಇದಲ್ಲದೆ 98-99ರ ಸಾಲಿನಲ್ಲಿ ಹೊಸದಾಗಿ ಸ್ವರ್ಣ ಜಯಂತಿ ಷಹರಿ ರೋಜ್‌ಗಾರ್ ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

(ಆ) ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆ (ಸಣ್ಣ ಕೈಗಾರಿಕೆಗಳಿಗೆ ಮಾತ್ರ)

(ರೂ. ಲಕ್ಷಗಳಲ್ಲಿ)

ಕ್ರ.ಸಂ.	ವರ್ಷ	ಸಂಖ್ಯೆ	ಸಾಲ ಮಂಜೂರಾದ ಮೊತ್ತ
1.	1995-96	4491	ರೂ. 2526.17 ಲಕ್ಷ
2.	1996-97	4230	ರೂ. 2544.46 ಲಕ್ಷ
3.	1997-98	4300	ರೂ. 2579.46 ಲಕ್ಷ
	(ಫೆಬ್ರವರಿ ಅಂತ್ಯದ ವರೆಗೆ)		